ನಾವು ಇದನ್ನೆಲ್ಲ ಸೂಪರ್‌ವೈಸ್ ಮಾಡುವುದಕ್ಕಾಗುತ್ತದೆ ಎನ್ನುವುದನ್ನು ಸಭೆಯವರೇ ಊಹಿಸಿ ಕೊಳ್ಳಬೇಕು. ಇದು ಬಹಳ ಕ್ಲಿಷ್ಟವಾದುದು. ಇದನ್ನು ಜಾರಿಗೆ ತರುವುದು ಬಹಳ ಕಷ್ಟ.

Sri R. NAGAN GOUDA.—May I know whether there is an Act prescribing the minimum wages for agricultural labour and also does it specify the minimum amount of time that the labourers should work ?

Sri K. PUTTASWAMY.—It is stated that they have to work for eight hours.

ಶ್ರೀ ಎಂ. ಬಸವರಾಜು.—ಸ್ವಾತಂತ್ರ್ಯ ಬಂದು 20 ವರ್ಷಗಳಾದ ಮೇಲೂ ಇದು ಕ್ಲಿಷ್ಟವಾದ ಸಮಸ್ಯೆ ಎಂದು ಹೇಳಿದರೆ ಹೇಗೆ ? ಇದಕ್ಕೆ ಪರಿಹಾರವನ್ನು ಕಂಡುಹಿಡಿಯುವುದು ಅವಶ್ಯಕ ವಲ್ಲವೇ ಆ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಕ್ಲಿಷ್ಟವಾದ ಸಮಸ್ಯೆಯಾದರೂ, ರಾಜ್ಯದ ಅನೇಕ ಭಾಗಗಳಲ್ಲಿ ಈಗ ಸರ್ಕಾರ ನಿಗದಿ ಪಡಿಸಿರತಕ್ಕ ಕನಿಷ್ಠ ಕೂಲಿಗಿಂತ ಹೆಚ್ಚು ಕೂಲಿ ದೊರಯುತ್ತಿದೆ. ಎಲ್ಲೋ ಕೆಲವು ಭಾಗಗಳಲ್ಲಿ ದೊರೆಯುತ್ತಿಲ್ಲ. ಉತ್ತರೋತ್ತರ ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಉತ್ತಮವಾದಂತೆಲ್ಲ ಕನಿಷ್ಠ ಕೂಲಿ ಕೊಡತಕ್ಕವರ ಸಂಖ್ಯೆ ಕೂಡ ಹೆಚ್ಚುತ್ತದೆ. ಆವಾಗ ಕನಿಷ್ಠ ಕೂಲಿಯನ್ನು ಕೊಡುವುದಕ್ಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಲೇಬರ್ ಇನ್‌ಸ್ಪೆಕ್ಟರುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿದ್ದಾರೆಂದು ಕನಿಷ್ಠ ಕೂಲಿ ಶಾಸನ ಜಾರಿಗೆ ಬರುವುದಕ್ಕೆ ಅವರಿಗೆ ಶಹಭಾಸಗಿರಿಯನ್ನು ಕೊಟ್ಟಿದ್ದಾರೆ. ಅನೇಕ ಕಡೆಗಳಲ್ಲಿ ಮಿನಿಮಂ ವೇಜಸ್ ಇಂಪ್ಲಿಮೆಂಟ್ ಮಾಡಿಲ್ಲ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ! ಎಷ್ಟು ಪ್ರಾಸಿಕ್ಯೂಷನ್ ಕೇಸನ್ ಹಾಕಿದ್ದಾರೆಂದು ಹೇಳುವುದಕ್ಕೆ ಸಾಧ್ಯವಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ನಾನು ಶಹಭಾಸಗಿರಿ ಕೊಟ್ಟಿರುವುದನ್ನು ಮಾನ್ಯ ಸದಸ್ಯರು ಯಾವತ್ತೂ ಒಪ್ಪುವುದಿಲ್ಲ ಎಂದು ನನಗೆ ಸ್ಪಷ್ಟವಾಗಿದೆ. 1967ರಲ್ಲಿ 117 ಕೇಸುಗಳನ್ನು ಹಾಕಲಾಗಿದೆ.

Sanction of High School at Halkurike

243. Sri V. L. SIVAPPA (Tiptur).—

Will the Minister for Education be pleased to state :—

(*a*) whether there has been a request by the public of Halkurike (Tiptur Taluk) to sanction a High School in that place ;

(*b*) whether the Sri Sirigere Mutt authorities have come forward to start a Hostel to facilitate running the High School in the place ;

(*c*) whether sanction was deferred in view of there being a High School in the proximity ;

(*d*) whether only 72 boys out of a total number of 147 eligible boys from the proximity Middle Schools have joined the High School and the rest have migrated to distant places ;

(*e*) whether there is any proposal to sanction a High School to Halkurike ?

A.—Sri N. M. KOTRABASAIAH SOGI (Deputy Minister for Education).—

(*a*), (*b*), (*c*), (*d*) and (*e*) No.

ಶ್ರೀ ಎ. ಎರ್. ಶಿವಪ್ಪ.—ಎಲ್ಲ ವಿಭಾಗಗಳಿಗೂ 'ಇಲ್ಲ' ಎಂದು ಹೇಳಿವ್ರೀರಿ. ಹಾಲ್ಕುರಿಕೆ ಮತ್ತು ಅದರ ಅಜೂಬಾಜೂ ಗ್ರಾಮಗಳ ಜನ ಹಾಲ್ಕುರಿಕೆಯಲ್ಲಿ ಒಂದು ಶಾಲೆಯನ್ನು ಪ್ರಾರಂಭ ಮಾಡಲು ಅನುಮತಿಯನ್ನು ಕೇಳಿ ಅರ್ಜಿಯನ್ನು ಸಲ್ಲಿಸಿರಲಿಲ್ಲವೇ ಸ್ವಾಮಿ.

†ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಸ್. ಕೆ. ಜಿ. ಸೊಸೈಟಿ ಎಂಬ ಒಂದು ಸಂಸ್ಥೆಯವರು ಹಾಲ್ಕುರಿಕೆಯಲ್ಲಿ ಒಂದು ಹೈಸ್ಕೂಲು ಪ್ರಾರಂಭ ಮಾಡಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದರು. ಆದರೆ ಈ ಗ್ರಾಮಕ್ಕೆ ಎರಡು ಮೈಲಿ ದೂರದಲ್ಲಿ ಇನ್ನೊಂದು ಗ್ರಾಮವಾದ ಮುಂಕಿ ಕೆರೆಯಲ್ಲಿ ಒಂದು ಹೈಸ್ಕೂಲು ಇರುವ ಕಾರಣ ಹಾಲ್ಕುರಿಕೆ ಗ್ರಾಮಕ್ಕೆ ಹೈಸ್ಕೂಲನ್ನು ಕೊಡುವುದಕ್ಕೆ ಆಗಲಿಲ್ಲ.

ಶ್ರೀ ಎ. ಎರ್. ಶಿವಪ್ಪ.—ತುಮಕೂರು ಜಿಲ್ಲೆಯ ವಿದ್ಯಾಧಿಕಾರಿಗಳು ಹಾಲ್ಕುರಿಕೆಯಲ್ಲಿ ಹೈಸ್ಕೂಲಿಗೆ 69 ಜನ ಸೇರುವುದಕ್ಕೆ ಸಿದ್ಧವಾಗಿದ್ದಾರೆ, ಈಗಾಗಲೇ ಸ್ಥಾಪನೆಯಾಗಿರತಕ್ಕ ಭುವನೇಶ್ವರಿ ಹೈಸ್ಕೂಲನಲ್ಲಿ 74 ಜನ ವಿದ್ಯಾರ್ಥಿಗಳಿದ್ದಾರೆ, ಹಾಲ್ಕುರಿಕೆಯಲ್ಲಿ ಹೈಸ್ಕೂಲು ಪ್ರಾರಂಭ ಮಾಡಿದರೆ ಅಲ್ಲಿ ವ್ಯಾಸಂಗ ಮಾಡುವವರಿಗೆ ಅನುಕೂಲವಾಗುವಂತೆ ಒಂದು ವಿದ್ಯಾರ್ಥಿ ನಿಲಯವನ್ನು ತೆಗೆಯುವುದಕ್ಕೆ ಸಹ ಅನುಕೂಲವಾಗಿದೆ ಎಂದು ಸಿಫಾರಸು ಮಾಡಿದ್ದರೂ ಸಹ ಅದಕ್ಕೆ ಅವಕಾಶ ಕೊಡದೆ ಇರಲು ಕಾರಣವೇನು ಸ್ವಾಮಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಜಿಲ್ಲಾ ವಿದ್ಯಾಧಿಕಾರಿಗಳು ಸಿಫಾರಸು ಮಾಡಿಲ್ಲ. ಹಾಲ್ಕುರಿಕೆ ಗ್ರಾಮದಲ್ಲಿ ಹೈಸ್ಕೂಲನ್ನು ಪ್ರಾರಂಭ ಮಾಡಿದರೆ ಮುಂಕಿಕೆರೆಯಲ್ಲಿರುವ ಹೈಸ್ಕೂಲಿಗೆ ಅಫೆಕ್ಟ್ ಆಗುತ್ತದೆ ಎನ್ನುವ ಕಾರಣಕ್ಕಾಗಿ ಹೊಸ ಹೈಸ್ಕೂಲನ್ನು ಕೊಡುವುದಕ್ಕಾಗಿಲ್ಲ.

ಶ್ರೀ ಜಿ. ದುಗ್ಗಪ್ಪ.—ಮಾನ್ಯ ಶಿವಪ್ಪನವರು ಎಲ್ಲ ಜನಗಳ ಪರವಾಗಿ ಅಲ್ಲಿ ಹೈಸ್ಕೂಲಿನ ಅವಶ್ಯಕತೆ ಇವೆ ಎಂದು ಅರ್ಜಿಯನ್ನು ಕೊಟ್ಟು, ವಿದ್ಯಾ ಮಂತ್ರಿಗಳು ಸಹಾನುಭೂತಿಯಿಂದ ಪರಿಶೀಲಿಸುತ್ತೇನೆ, ಕೊಡುತ್ತೇನೆ ಎಂದು ಹೇಳಿದ್ದು ಗೊತ್ತಿದೆಯೇ ಸ್ವಾಮಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಎಸ್.ಕೆ.ಡಿ. ಸೊಸೈಟಿ ಪಲ್ಲಸಿದ ಬೇಡಿಕೆ ಏನಾ ಬೇರೆ ಬೇಡಿಕೆ ಬಂದಿರುವ ಬಗ್ಗೆ ನನ್ನಲ್ಲಿ ಮಾಹಿತಿ ಇಲ್ಲ.

Mr. SPEAKER.—Next question.

Sri H. SIDDAVEERAPPA.—Now that you have called the next question I do not want to say anything, but I would like to point out that I myself wrote a letter to the Education Minister in this behalf and I have received a reply. But here the Deputy Minister gives a blanket reply as "No".

Mr. SPEAKER.—I did not notice the Hon. member have already called the next question.

Sri S. SIVAPPA.—He is referring because he had personally written a letter. Even then the Deputy Minister says no such representation has been received.

Sri H. SIDDAVEERAPPA.—If the Education Minister were here I could have confronted him with his reply. He had promised to me : "This year don't press ; next year I will give."

New Industries in the State

241. Sri K. H. RANGANATH (Mudigere).—

Will the Minister for Industries, Information and Publicity be pleased to state :—

(*a*) the number of new Industries that are proposed to be established in the State ;